# ಕನ್ನಡ ಸಾಹಿತ್ಯದಲ್ಲಿ ಅಂಬೇಡ್ಕರ್ ಚಿಂತನೆ

**ಪೃಥ್ವಿರಾಜ್ ಬಿ.**

ಉಪನ್ಯಾಸಕರು, ಕನ್ನಡ ವಿಭಾಗ, ಪೊಂಪೈ ಕಾಲೇಜು, ಐಕಳ, ಮಂಗಳೂರು.

DOI: https://doi.org/10.5281/zenodo.15504462

## ABSTRACT:

ಅಂಬೇಡ್ಕರ್ ಸಿದ್ದಾಂತದ ಪ್ರಭಾವವಾಗಿ ಇಡೀ ಭಾರತ ಸೇರಿದಂತೆ ಈ ನಾಡಿನ ಅಸ್ಪೃಶ್ಯ ಅಕ್ಷರಸ್ಥ ಸಮುದಾಯದ ಎದೆಯಾಳದಲ್ಲಿ ಹುಟ್ಟಿದ ಹೋರಾಟವನ್ನು ದಲಿತ ಹೋರಾಟ ಎಂದು ಕರೆಯಲಾಗಿದೆ. ನಂತರ ಕರ್ನಾಟಕದಲ್ಲಿ ದಲಿತ ಚಳುವಳಿ ಮುಂದುವರೆಯಲು ಕಾರಣವಾಯಿತು. ಈ ದಲಿತ ಚಳುವಳಿ ಯಶಸ್ವಿಯಾಗಲು ದಲಿತ ಸಾಹಿತ್ಯವೂ ಕಾರಣವಾಯಿತು. ಈ ದಲಿತ ಸಾಹಿತ್ಯವೂ ದಲಿತರ ವರ್ತಮಾನದ ಬದುಕಿನ ಕರಾಳತೆಯನ್ನು ಶೋಧಿಸಿದವು ಅವುಗಳಲ್ಲಿದ್ದ ಅಸಮಾನತೆ ಮತ್ತು ಅನ್ಯಾಯದ ನೆಲೆಗಳನ್ನು ಗುರುತಿಸಿದವು, ಅದನ್ನು ಹೋಗಲಾಡಿಸುವ ದಾರಿಗಳ ಬಗ್ಗೆ ಅಲೋಚಿಸಿದವು.

ಕನ್ನಡ ಸಾಹಿತ್ಯದಲ್ಲಿ ಬಸವ, ಬುದ್ದ, ಮಾರ್ಕ್ಸರಂತಹ ಚಿಂತನೆಗಳ ಪ್ರೇರಕ ಶಕ್ತಿಯಾಗಿ ಕೆಲಸ ಮಾಡಿದ ಹಾಗೇ ಅಂಬೇಡ್ಕರ್ ಚಿಂತನೆಗಳು ಕನ್ನಡ ಸಾಹಿತ್ಯದ ಮೇಲೆ ಹೆಚ್ಚು ಪ್ರಭಾವ ಬೀರಿದೆ.

## KEYWORDS:

ಸಂವಿಧಾನ ಶಿಲ್ಪಿ, ಕಾರ್ಲ್ ಮಾರ್ಕ್ಸ್, ಲೋಹಿಯಾ, ಸಮಾನತೆ, ಸಿದ್ದಲಿಂಗಯ್ಯ, ಚೆನ್ನಣ್ಣ ವಾಲೀಕಾರ್, ಸಮುದಾಯ.

ಈ ಸಂಶೋಧನಾ ಲೇಖನದಲ್ಲಿ ಕನ್ನಡ ದಲಿತ ಸಾಹಿತ್ಯದಲ್ಲಿ ಅಂಬೇಡ್ಕರ್‌ನ ಚಿಂತನೆಯ ಪ್ರಭಾವವನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ. ದಲಿತ ಸಾಹಿತ್ಯವನ್ನು ಮುನ್ನಡೆಸಿಕೊಂಡು ಮತ್ತು ಮುಂದುವರಿಸಿದ ಲೇಖಕರು ಹಲವಾರು, ಈ ಸಂಶೋಧನ ಪ್ರಬಂಧದಲ್ಲಿ ಕನ್ನಡ ಸಾಹಿತ್ಯದಲ್ಲಿ ಅಂಬೇಡ್ಕರ್‌ರವರ ಹೆಸರನ್ನು ಗುರುತಿಸಿದವರಾದ ಸಿದ್ದಲಿಂಗಯ್ಯ, ಚೆನ್ನಣ್ಣವಾಲೀಕರ್, ಶಿವರುದ್ರ ಕೆ ಕಲ್ಲೋಳಿ ಯವರ ಬಗ್ಗೆ ವಿವರಿಸುವ ಉದ್ದೇಶವನ್ನು ಇಟ್ಟುಕೊಂಡಿದೆ. ವಿಶ್ಲೇಷಣಾತ್ಮಕ ವಿಧಾನ ಮತ್ತು ವಿವರಣಾತ್ಮಕ ವಿಧಾನದ ಮೂಲಕ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇಲ್ಲಿವರೆಗೆ ದಲಿತ ಸಾಹಿತ್ಯದ ಕುರಿತು ಅಧ್ಯಯನಗಳು ಎಷ್ಟು ನಡೆದಿವೆ ಎಂದು ಸಮೀಕ್ಷೆ ನಡೆಸಿದಾಗ ಕೆಲವು ಸಂಶೋಧನಾ ಪ್ರಬಂಧಗಳು ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ದಾಖಲಾಗಿವೆ. ಕೆಲವು ಪ್ರಕಟರೂಪದಲ್ಲಿ ಇದ್ದರೆ ಇನ್ನೂ ಕೆಲವು ಅಪ್ರಕಟ ರೂಪದಲ್ಲಿ ಉಳಿದುಕೊಂಡಿದೆ ಆದರೆ ಅಂಬೇಡ್ಕರ್‌ರ ಚಿಂತನೆಯು

ಕನ್ನಡ ಸಾಹಿತ್ಯದ ಮೇಲೆ ಹೇಗೆ ಪ್ರಭಾವ ಬೀರಿದೆ ಎಂದು ತಿಳಿಸಿಕೊಡುವ ಕೃತಿಗಳು ಯಾವುದೆಂದು ಗಮನಿಸುವಾಗ "ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಡಾ. ಅಂಬೇಡ್ಕರ್‌ರ ಚಿಂತನೆಯ ಎಳೆಗಳು" ಎಸ್.ಪಿ. ಪದ್ಮಪ್ರಸಾದ್‌ರು ರಚಿಸಿರುವಂತಹದ್ದು, ಎರಡನೇಯ ಕೃತಿ "ಆಧುನಿಕ ಕನ್ನಡ ಸಾಹಿತ್ಯದ ಮೇಲೆ ಅಂಬೇಡ್ಕರ್ ಪ್ರಭಾವ" ಅನಸೂಯ ಕೆ ಕಾಂಬಳೆ 2011 ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸಿರುವಂತಹದ್ದು. ಈ ಸಂಶೋಧನಾ ಲೇಖನದ ವ್ಯಾಪ್ತಿಯ ವಿಷಯಕ್ಕೆ ಬಂದರೆ ಅಂಬೇಡ್ಕರ್ ಮೇಲೆ ಹಲವಾರು ಚಿಂತನೆಗಳ ಪ್ರಭಾವ ಇದ್ದಿರಬಹುದು ಆದರೆ ಕನ್ನಡ ಸಾಹಿತ್ಯದಲ್ಲಿ ಅಂಬೇಡ್ಕರ್‌ನ ಚಿಂತನೆ ಎಂಬ ವಿಷಯಕ್ಕೆ ಬರುವಾಗ ಈ ಚಿಂತನೆಯ ಪ್ರಭಾವ ಪ್ರಾಚೀನ ಕಾವ್ಯಗಳಾದ ಕವಿರಾಜ ಮಾರ್ಗ, ಜೈನ ಪುರಾಣ, ಮಧ್ಯಕಾಲೀನ ವಚನಕಾರರ ಕಾಲಘಟ್ಟ ಮತ್ತು ಕೀರ್ತನೆಕಾರರ ಸಾಹಿತ್ಯದಲ್ಲಿಯೂ ಅಸಮಾನತೆಯ ಸಾಮಾಜಿಕ ನೆಲೆಯನ್ನು ಗಮನಿಸುತ್ತೇವೆ. ಬಸವಣ್ಣ ಮತ್ತು ಕನಕದಾಸರ ಸಾಲಿಗೆ ಅಂಬೇಡ್ಕರ್ ಸೇರುತ್ತಾರೆಂದು ಹೋಲಿಸಿ ವ್ಯತ್ಯಾಸ ಕಂಡು ಹುಡುಕುತ್ತೇವೆ. ಅಂದರೆ ಈ ಸಮಾಜದಲ್ಲಿದ್ದ ಅಸಮಾನತೆಯೂ ಎಲ್ಲಾ ಕಾಲಗಳಲ್ಲೂ ಕಂಡು ಬರುತ್ತದೆ ಎಂಬ ಅರ್ಥವನ್ನು ನೀಡುತ್ತದೆ. ಆಯಾ ಕಾಲದ ಆಧ್ಯಾತ್ಮ ಜ್ಞಾನಿಗಳು ಸಮ ಸಮಾಜದ, ಆರೋಗ್ಯ ಪೂರ್ಣ ಸಮಾಜವನ್ನು ಸ್ಥಾಪಿಸುವ ಸಂಕಲ್ಪವನ್ನು ಹೊಂದಿದ್ದರು. ಅಂಬೇಡ್ಕರ್ ಸಮ ಸಮಾಜದ ಆಶಯವನ್ನು ಹೊಂದಿದ್ದರು ಕೂಡ ಅವರೂ ಬಾಲ್ಯದಲ್ಲಿ ಅನುಭವಿಸಿದ ಜಾತಿ ಶೋಷಣೆ ಅವರ ಮನಸ್ಸಿನಲ್ಲಿ ಅಚಲವಾಗಿ ಬೇರೂರಿತು. ಅದಕ್ಕಾಗಿ ದೇಶದ ಸ್ವಾಂತತ್ರ್ಯದ ಜೊತೆಗೆ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ಹಂಬಲಿಸಿದರು. ಅಂಬೇಡ್ಕರ್ ನಂತರ ಅವರ ವಾದ ಸಿದ್ಧಾಂತ ದೇಶದ ಎಲ್ಲಾ ಕಡೆ ಸಂಚರಿಸಿದವು ಕರ್ನಾಟಕದಲ್ಲಿ ದಲಿತ ಸಾಹಿತ್ಯ ಚಳುವಳಿಯಾದ ನಂತರ ದಲಿತ ಸಾಹಿತ್ಯದ ಮೇಲೆ ಅವರ ಪ್ರಭಾವ ಬಿದ್ದಿತು. ಆದ್ದರಿಂದ ಈ ಸಂಶೋಧನಾ ಲೇಖನದಲ್ಲಿ ಅಂಬೇಡ್ಕರ್‌ನ ತತ್ವ, ವಾದಗಳು ದಲಿತ ಚಳುವಳಿ ಪ್ರಾರಂಭವಾದಾಗ ಸಾಹಿತ್ಯದಲ್ಲಿ ಹೇಗೆ ಪರಿಣಾಮ ಬೀರಿತು ಎಂಬುವುದನ್ನು ಕನ್ನಡ ದಲಿತ ಸಾಹಿತ್ಯದ ಕವನ ಮತ್ತು ಕಾದಂಬರಿಯನ್ನು ಆಯ್ದುಕೊಂಡು ಅಂಬೇಡ್ಕರ್‌ನ ಧೋರಣೆಗಳು ಹೇಗೆ ಕಾಣಿಸಿವೆ ಎಂಬ ವ್ಯಾಪ್ತಿ ಇಟ್ಟುಕೊಂಡು ವಿಶ್ಲೇಷಣೆ ಮಾಡಲಾಗಿದೆ.

ರಾಮಾಯಣ ಹಾಗೂ ಮಹಾಭಾರತ ಗ್ರಂಥಗಳ ಬಗೆಗಿನ ಡಾ. ಬಿ ಆರ್ ಅಂಬೇಡ್ಕರ್‌ರವರ ಹರಿತವಾದ ವಿಮರ್ಶೆ ಸಾಹಿತಿಗಳ ಗಮನ ಸೆಳೆದವು. ದಲಿತರ ಬದುಕನ್ನು ಹಸನಾಗಿಸಲು ಸಾಹಿತ್ಯದ ಮೂಲಕ ತಮ್ಮ ಕೊಡುಗೆ ನೀಡಿದರು. ಇದರಿಂದ ಬದುಕು ಗುಲಾಮತನದಿಂದ ಕೂಡಿದೆ ಎಂಬ ಅರಿವು ದಲಿತ ಸಮುದಾಯಕ್ಕೆ ಮೂಡಲು ಪ್ರಾರಂಭವಾಯಿತು.

ದಲಿತ ಚಳುವಳಿಯು ಪ್ರಾರಂಭವಾದ ದಿನಗಳಲ್ಲಿ ಹೆಚ್ಚಾಗಿ ಹೋರಾಟದ

ಹಾಡುಗಳು ಬೆಳಕಿಗೆ ಬಂದವು ದಲಿತ ಕವಿಗಳೆಂದು ಹೆಸರು ಪಡೆದ ಬಿ. ಕೃಷ್ಣಯ್ಯ, ಸಿದ್ದಲಿಂಗಯ್ಯ, ಶಿವಣ್ಣ ಕಂದೇಗಾಲ, ಅಶ್ವತ್ ಅಂತ್ಯಜ, ವಿ ನಾಗರಾಜ್, ಆರ್ ಮಾನಸಯ್ಯ, ಚಂದ್ರಪ್ರಸಾದ್ ತ್ಯಾಗಿ, ಮುಳ್ಳೂರ್ ನಾಗರಾಜ್ ಮುಂತಾದವರು ಉತ್ತಮ ಭಾಷಣಗಳನ್ನು ನಡೆಸಿ ದಲಿತ ಚಳುವಳಿಗೆ ಮೆರುಗು ನೀಡಿದರು. ಕೋಲಾರ ವೆಂಕಟೇಶ್, ಪಿಚ್ಚಳ್ಳಿ ಶ್ರೀನಿವಾಸ್, ಕರ್ನಲ್ ನಾರಾಯಣ ಸ್ವಾಮಿ, ಕಂದೇಗಾಲ್ ಶಿವಣ್ಣ, ಪೇಪರ್ ಟೌನ್ ಚಂದ್ರು, ಆರ್ ಮಾನಸಯ್ಯ, ಸಿ ದಾನಪ್ಪ ಮುಂತಾದವರು ಹಳ್ಳಿಹಳ್ಳಿಗಳಿಗೆ ಹೋಗಿ ಹಾಡನ್ನು ಹಾಡಿದರು. ಹೀಗೆ ದಲಿತ ಚಳುವಳಿಯು ಸಾಹಿತ್ಯದ ಮೂಲಕವು ಪ್ರಾರಂಭವಾಯಿತು. ಸಾಹಿತ್ಯ ಮಾಧ್ಯಮವನ್ನು ಕೇಂದ್ರವಾಗಿಟ್ಟುಕೊಂಡು ಕಾವ್ಯ, ಕಥೆ, ನಾಟಕ ಕಾದಂಬರಿಯನ್ನು ಬರೆದ ಬರಹಗಾರರು ಒಂದು ಕಡೆಗಾದರೆ ಆ ಬರಹಗಾರರ ಸಾಹಿತ್ಯಿಕ ಬದುಕಿನ ಬರಹಗಳನ್ನು ದಾಖಲಿಸಿದ ಬರಹಗಾರರ ವರ್ಗವು ಇನ್ನೊಂದು ಕಡೆಗಿದೆ. ಹೀಗೆ ಇವರನ್ನು ದಲಿತ ಬರಹಗಾರರು ಮತ್ತು ದಲಿತೇತರ ಬರಹಗಾರರು ಎಂದು ವಿಂಗಡಿಸಬಹುದು.

ದಲಿತ ಸಾಹಿತ್ಯ ಚಳುವಳಿಯಲ್ಲಿ ಮಾರ್ಕ್ಸ್‌ವಾದವೂ ಬೇರೂರಿದ ನಂತರ, ಲೋಹಿಯಾ ನೀತಿಯೂ ಪ್ರಚಲಿತವಾಗಿ ಇದ್ದ ಕಾರಣ, ಕೆಲವು ದಲಿತ ಹೋರಾಟಗಾರರು ದಲಿತ ಚಳುವಳಿಗಾರರಿಗೆ ಲೋಹಿಯಾ ನೀತಿಯನ್ನು ಅಳವಡಿಸಲು ಕರೆ ನೀಡಿದರು.

**ಸಿದ್ದಲಿಂಗಯ್ಯ:**

ದಲಿತ ಕವಿ ಎಂದೇ ಪ್ರಸಿದ್ದರಾದ ಸಿದ್ದಲಿಂಗಯ್ಯನವರು ದಲಿತ ಹೋರಾಟ ಮತ್ತು ಸಾಮಾಜಿಕ ಸಮಾನತೆಗಾಗಿ ಕಾವ್ಯ, ನಾಟಕ, ಪ್ರಬಂಧವನ್ನು ಬರೆದವರು ಹಾಗೂ ಆಧುನಿಕ ದಲಿತ ಸಾಹಿತ್ಯ ಮೊದಲು ಗುರುತಿಸಿದ್ದು ಕ್ರಾಂತಿಯ ಕಿಡಿಯಲ್ಲಿ ಎಂಬುವುದು ಗಮನಾರ್ಹವಾದದು. ಸಿದ್ದಲಿಂಗಯ್ಯನವರ ಕವನದಲ್ಲಿ ಬರುವ "ಇಕ್ರಲಾ ಒದಿರಲಾ ಈ ನನ್ನ ಮಕ್ಳ ಚರ್ಮ ಎಬ್ರಲಾ" ಎಂದು ಹೇಳುವುದರಲ್ಲಿ ಇಲ್ಲಿವರೆಗೆ ಅದುಮಿಟ್ಟಿದ್ದ ರೋಷವನ್ನು ಸೂಚಿಸುತ್ತದೆ. ಸಿದ್ದಲಿಂಗಯ್ಯನವರ ಈ ಇಕ್ರಲಾ ಒದಿರಲಾ ಪದ ಬಹಳಷ್ಟು ಚರ್ಚೆಗೆ ಕಾರಣವಾಯಿತು. ಮನಸ್ಸಿನಲ್ಲಿರುವ ಭಾವನೆಯನ್ನು ತೋರಿಸಲು ಯಾವ ಮಾದರಿಯಲ್ಲಿ ಕೂಡ ಕವನವನ್ನು ಬರೆಯಬಹುದು ಎಂದು ತೋರಿಸಿಕೊಟ್ಟಂತಿತ್ತು. ಆದರೆ ಅಂಬೇಡ್ಕರ್‌ರ ತತ್ವ ಚಿಂತೆಗಳು ಆಳವಾಗಿ ಮನಸ್ಸಿನಲ್ಲಿ ಬೇರೂರಿದ ಕಾರಣ ಈ ಕವನ ಆಕ್ರೋಶದಿಂದ ಕೂಡಿತ್ತು.

ಸಂವಿಧಾನ ಶಿಲ್ಪಿ, ಶಿಕ್ಷಣ ಪ್ರೇಮಿ ಎಂದು ಅಂಬೇಡ್ಕರ್‌ರವರನ್ನು ಕರೆಯುವ ಸಿದ್ದಲಿಂಗಯ್ಯನವರು, ಅಂಬೇಡ್ಕರ್‌ರವರ ಬಗ್ಗೆ ಒಂದು ಕವನವನ್ನು ರಚಿಸುತ್ತಾರೆ. ಆ

ಕವನ ಬಹಳಷ್ಟು ಹೆಸರುವಾಸಿ ಪಡೆದಿದೆ.

**ನಾಡ ನಡುವಿನಿಂದ ಸಿಡಿದ**
**ನೋವಿನ ಕೂಗೆ**
**ಆಕಾಶದ ಅಗಲಕ್ಕೂ**
**ನಿಂತ ಆಲವೆ**

ಅಂಬೇಡ್ಕರ್‌ರವರು ಶತಮಾನಗಳಿಂದ ನೋವು, ಕಷ್ಟ, ಅಸಮಾನತೆಗಳಿಂದ ಕೊರಗಿದವರ ನಾಡಿನಿಂದಲೇ ಧ್ವನಿಯಾಗಿ, ಅವರ ಪರವಾಗಿ ಅವರಿಗೆ ಆಸರೆಯಾಗಿ ಆಕಾಶದಷ್ಟು ವಿಸ್ತಾರವಾಗಿ ನಿಂತಿದ್ದಾರೆ ಎಂಬ ಅರ್ಥವನ್ನು ಸೂಚಿಸುತ್ತದೆ. ಅಂಬೇಡ್ಕರ್‌ರವರ ಕುರಿತು ಕನ್ನಡ ಸಾಹಿತ್ಯದಲ್ಲಿ ಅನೇಕ ಕವಿತೆ ಇದ್ದರೂ ಅಂಬೇಡ್ಕರ್‌ರವರ ಚಿಂತನೆಯ ಪ್ರಭಾವ ಮೊದಲು ಬಂದದ್ದು ಸಿದ್ದಲಿಂಗಯ್ಯನವರ ಈ ಕವನದ ಮೂಲಕವೇ. ಈ ಕವನದಲ್ಲಿ ಅಂಬೇಡ್ಕರ್ ರವರ ಸಾಧನೆಯನ್ನು ಹೊಗಳಿದ್ದು ಮಾತ್ರವಲ್ಲದೇ ಅವರನ್ನೇ ಪ್ರಶ್ನೆ ಮಾಡಲಾಗಿದೆ

**ಮಹಾರಾಷ್ಟ್ರದ ಮಣ್ಣಿನಲ್ಲಿ**
**ಮೂಡಿ ಬಂದ ಗುಡುಗು ಸಿಡಿಲೆ**
**ಮಳೆಯನೇಕೆ ತರಲಿಲ್ಲ**
**ಮಿಂಚು ಮಾಯ ಅಷ್ಟೆಯೆ?**

ಮಹಾರಾಷ್ಟ್ರದ ಮಣ್ಣಿನಲ್ಲಿ ಅಂದರೆ ಸಮಾಜ ಸುಧಾರಕರು ಅಥವಾ ಸಂತರು ಹುಟ್ಟಿದ ಮಣ್ಣಿನಲ್ಲಿ ಹುಟ್ಟಿ ಬಂದರು ಗುಡುಗು, ಸಿಡಿಲು, ಮಿಂಚು ಇವೆಲ್ಲಾ ತಂದರು ಅಸಮಾನತೆಯನ್ನು ಹೋಗಲಾಡಿಸಲು ಸಾಧ್ಯವಾಗಲಿಲ್ಲ ಎಂಬ ಅರ್ಥದಲ್ಲಿ ಮಳೆಯನ್ನೇಕೆ ತರಲಿಲ್ಲವೇಕೆ ಎಂಬ ಅರ್ಥವೂ ಬರುತ್ತದೆ. ಅಂದೇ ಜಾತಿ ಅಸಮಾನತೆಯನ್ನು ಹೋಗಲಾಡಿಸಲಿಲ್ಲವೇಕೆ ಎನ್ನುವುದು ಆಗಿದೆ.

**ಚೆನ್ನಣ್ಣ ವಾಲೀಕಾರರು:**

ಚೆನ್ನಣ್ಣ ವಾಲೀಕಾರರರು ಕವಿ, ವಿಮರ್ಶಕ, ಸಂಶೋಧಕ, ವಿದ್ವಾಂಸ, ನಾಟಕಗಾರರು ಹಾಗೂ ಕಾದಂಬರಿಗಾರರು ಇವರು ಅಂಬೇಡ್ಕರ್‌ರವರನ್ನೇ ನಿದರ್ಶನವನ್ನಾಗಿ ಇಟ್ಟುಕೊಂಡು ರಚಿಸಿದ ಕವನವೆಂದರೆ ಭೀಮ್ರಾವ ಅಂಬೇಡ್ಕರ್

**ಭೀಮ್ರಾವ ಅಂಬೇಡ್ಕರ್ ಭೀಮ್ರಾವ ಅಂಬೇಡ್ಕರ್**
**ಅಮಾವಾಸಿ ರಾತ್ರ್ಯಾನ ಹುಣ್ಣಿಮೆ ಚಂದ್ರಾಮನೆ**
**ಕೋಟಿ ದಲಿತರ ಎದೆಯ ಹುಣ್ಣಿಂದ ಆದಂಥ**
**ನೀ ಬರುವಾಗ ನಾವಾದೆವ್ ಮೂಕ ನಾಯಕನೆ**

ಇಲ್ಲಿ ಅಂಬೇಡ್ಕರ್‌ರವರನ್ನು ಚಂದ್ರನಿಗೆ ಹೋಲಿಸಿ ಕವನ ಬರೆಯಲಾಗಿದೆ. ನಂತರ ಕೋಟಿಗೊಬ್ಬ ಇಂತಹ ವ್ಯಕ್ತಿ ಇರಲು ಸಾದ್ಯ ಎಂದು ಅಂಬೇಡ್ಕರ್ ರನ್ನು

ಹೊಗಳಿದ್ದಾರೆ. 12ನೇ ಶತಮಾನದಿಂದಲೂ ಅಸಮಾನತೆ ಶೋಷಣೆ ಇದ್ದಿತು. ಅಸಮಾನತೆಯನ್ನು ಹೋಗಲಾಡಿಸಲು ಪ್ರಯತ್ನಪಟ್ಟವರಲ್ಲಿ ಬಸವಣ್ಣನು ಒಬ್ಬನು, ನಂತರ ಆಧುನಿಕ ಯುಗದಲ್ಲಿ ಭಾರತ ದೇಶದ ಹೊರಗೆ ಅಸಮಾನತೆಯನ್ನು ತೊಲಗಿಸಲು ಶ್ರಮಿಸಿದ ನಾಯಕರಾದ ಅಬ್ರಹಂ ಲಿಂಕನ್, ಕಾರ್ಲ್ ಮಾರ್ಕ್ಸ್‌ನ ಬಗ್ಗೆ ಈ ಕವನದಲ್ಲಿ ತಿಳಿಸಿದ್ದಾರೆ. ಸ್ವಾತಂತ್ರ್ಯದ ನಂತರ ಅಂಬೇಡ್ಕರ್‌ರವರ ದಲಿತ ಚಳುವಳಿಗೆ ಬೆಂಬಲ ಸಹಕಾರವನ್ನು ನೀಡಲಿಲ್ಲ ಎಂಬುವುದರ ಕುರಿತು ವಿಷಾದ ವ್ಯಕ್ತವಾಗುತ್ತದೆ. ಸಮರ್ಪಕವಾಗಿ ಬೆಂಬಲ ನೀಡದ ಫಲವಾಗಿ ದಲಿತ ಚಳುವಳಿಯು ಅಂಬೇಡ್ಕರ್ ರವರ ನಂತರ ದೇಶ ವ್ಯಾಪಿಸಿತು ಎಂಬ ಅರ್ಥವು ತಿಳಿಯುತ್ತದೆ. ಈ ಕವನವನ್ನು ಸೂಕ್ಷ್ಮವಾಗಿ ಅಧ್ಯಯನಕ್ಕೆ ಒಳಪಡಿಸಿದಾಗ ಕಾರ್ಲ್ ಮಾರ್ಕ್ಸ್ ಚಿಂತನೆ ಮತ್ತು ಅಬ್ರಹಂ ಲಿಂಕನ್‌ರ ಚಿಂತನೆ ಮೂಡುತ್ತದೆ. ಒಂದೇ ಚಿಂತನೆ ಸಾಲದು ಚಿಂತನೆಗಳೆಲ್ಲವೂ ಒಟ್ಟಿಗೆ ಸೇರಿ ಉದ್ದೇಶವನ್ನೂ ಈಡೇರಿಸಬೇಕೆಂಬುವುದು ಈ ಕವನದ ತಾತ್ಪರ್ಯ ಇನ್ನೂ ಕೆಲವು ಕವನಗಳ ಮೂಲಕ ಎಲ್ಲರಿಗೂ ಸಮಾನತೆ ಬೇಕು ಎಂದಿದ್ದಾರೆ.

**ಶಿವರುದ್ರ ಕೆ ಕಲ್ಲೋಳಿ:**

ಹೊಲಗೇರಿಯ ರಾಜಕುಮಾರ ಶಿವರುದ್ರ ಕಲ್ಲೋಳಿಯವರು ಬರೆದ ಕಾದಂಬರಿಯಲ್ಲಿ ಮರಾಠ ರಾಜಮನೆತನದಲ್ಲಿ ಹುಟ್ಟಿದ ಮಗು ಕೌಟುಂಬಿಕ ಕಾರಣದಿಂದ ತಂದೆ, ತಾಯಿಯನ್ನು ಕಳೆದುಕೊಂಡು ನಂತರ ಅದರ ಜೀವಕ್ಕೂ ಅಪಾಯವಿದ್ದರಿಂದ ಯಾರೋ ಒಬ್ಬರು ಮಗುವನ್ನು ಹೊಲಗೇರಿಯಲ್ಲಿನ ಕೆಳಜಾತಿಯೆಂದು ಗುರುತಿಸಲ್ಪಟ್ಟ ದಂಪತಿಗಳಿಗೆ ಕೊಟ್ಟು ಹೋಗುತ್ತಾರೆ. ನಂತರ ಆ ಮಗು ಹೊಲಗೇರಿಯಲ್ಲಿಯೇ ದೊಡ್ಡದಾಗಿ ಬೆಳೆದು, ಕಾಲೇಜಿಗೆ ರ್ಯಾಂಕು ಬಂದಾಗ ದಲಿತ ವಿದ್ಯಾರ್ಥಿಯನ್ನು ಸನ್ಮಾನಿಸಬೇಕೊ ಬೇಡವೊ ಎಂದು ಕಾಲೇಜಿನ ಆಡಳಿತ ಮಂಡಳಿ ಚರ್ಚಿಸುವ ಸನ್ನಿವೇಶವಿದೆ. ಸನ್ಮಾನ ನಡೆದರೆ ಹೆಚ್ಚಿನ ದಲಿತ ವಿದ್ಯಾರ್ಥಿಗಳು ಕಾಲೇಜಿಗೆ ಬಂದು ಬೇರೆ ಜಾತಿಯ ಹುಡುಗಿಯರನ್ನು ಪ್ರೀತಿಸಬಹುದು ಎಂದು ಮಂಡಳಿಯ ಅಧ್ಯಕ್ಷ ಆತಂಕಿಸುವನು. ಇದು ಕಥೆಯಲ್ಲಿ ಒಂದು ಕಡೆಗಾದರೆ ಎಷ್ಟೇ ಕಷ್ಟ ಇದ್ದರು ಉನ್ನತ ಶಿಕ್ಷಣವನ್ನು ಪಡೆದು ಹೋಲಗೇರಿಯಲ್ಲಿ ಇದ್ದು ಅಲ್ಲೇ ಕೇಂದ್ರ ಸರ್ಕಾರದ ಉದ್ಯೋಗವನ್ನು ಪಡೆಯುತ್ತಾನೆ. ಮೇಲು-ಕೀಳು ಭಾವನೆಯನ್ನು ತೊಲಗಿಸಲು ಹೋರಾಡುತ್ತಾನೆ. ಈ ಕಥೆಯಲ್ಲಿ ಸಾಮಾಜಿಕ ಅಂಶವು ಇದೆ ಹಾಗೆಯೇ ಐತಿಹಾಸಿಕ ಅಂಶವು ಬೆಸೆದುಕೊಂಡಿದೆ.

ಕೊನೆಗೆ ತಾನೂ ಮರಾಠ ರಾಜಮನೆತನದವನು ಎಂದು ತಿಳಿದಾಗ ದಲಿತ ಹೋರಾಟವನ್ನೇ ನಿಲ್ಲಿಸಿ ಬಿಡುತ್ತಾನೆ. ಈ ಸ್ಥಿತಿಯನ್ನು ಅಂಬೇಡ್ಕರ್ ರವರ ಜೀವನಕ್ಕೆ

ಹೋಲಿಸಿದಾಗ ಅವರು ಪಟ್ಟ ಕಷ್ಟ, ಜಾತಿಯತೆಯ ಸವಾಲುಗಳನ್ನು ಎದುರಿಸಿರುವ ಬಗೆಗಳು ಈ ಕಥೆಯ ಮೂಲಕ ಬೆಳಕಿಗೆ ಬರುತ್ತದೆ. ಈ ಕಾದಂಬರಿಯು ಅಂಬೇಡ್ಕರ್‌ರವರ ಚಿಂತನೆಯ ನೆಲೆಯಲ್ಲಿ ಇವೆ.

**ಉಪಸಂಹಾರ:**

ಇಷ್ಟೇ ಅಲ್ಲದೇ ದೇವನೂರು ಮಹದೇವ ಲೇಖಕರಿಂದ ಹಿಡಿದು ಅನೇಕ ದಲಿತ ಮತ್ತು ದಲಿತೇತರ ಲೇಖಕರ ಮೇಲೆ ಅಂಬೇಡ್ಕರ್ ಪ್ರಭಾವ ಬೀರಿವೆ. ಅಂಬೇಡ್ಕರ್ ರವರ ಪ್ರಭಾವ ಕರ್ನಾಟಕ ದಲಿತ ಸಾಹಿತ್ಯದ ಮೇಲೆ ಬಂದ ಪರಿಣಾಮ ದಲಿತ ಸಾಹಿತ್ಯದ ಪ್ರಭಾವದಿಂದಾಗಿ ಕಾನೂನಿನಲ್ಲಿ ಬದಲಾವಣೆ ಆಯಿತು, ದಲಿತರ ಭೂಮಿ ದಲಿತೇತರರಿಗೆ ನೋಂದಾವಣೆ ಆಗುವಂತಿಲ್ಲ ಎಂಬ ನಿಯಮ ಬಂದಿತು. ಭೂಮಾಲೀಕರ ಅಟ್ಟಹಾಸ ಕೊನೆಯಾಯಿತು. ಹಲವು ಕಾನೂನು ಮೀಸಲಾಯಿತಿ ದೊರಕಿತು. ದಲಿತರಿಗೆ ಧಾರ್ಮಿಕ, ಸಾಮಾಜಿಕ, ಸ್ವಾತಂತ್ರ್ಯ ಒದಗಿ ಬಂತು. ದಲಿತರು ಆರ್ಥಿಕವಾಗಿ ಮುನ್ನಡೆ ಪಡೆಯಲು ಕನ್ನಡ ದಲಿತ ಸಾಹಿತ್ಯ ಕಾರಣವಾಯಿತು.

**ಪರಾಮರ್ಶನ ಗ್ರಂಥಗಳು:**

1. ಮನು ಬಳಿಗಾರ್, (2019), ದಲಿತ ಸಾಹಿತ್ಯ ಸಂಪುಟ: ಸಂಶೋಧನೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
2. ಪದ್ಮ ಪ್ರಸಾದ್ ಎನ್.ಪಿ., (2020), ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಡಾ. ಅಂಬೇಡ್ಕರ್ ಚಿಂತನೆಯ ಎಳೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಮನು ಬಳಿಗಾರ್, (2019), ದಲಿತ ಸಾಹಿತ್ಯ ಸಂಪುಟ: ಮಾನವಿಕ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4. 0 International License.